ಸಾಕ್ಷಿಯು ಕ್ರಮವಾಗಿ ಪ್ರಮಾಣಿಕರಿಸಿದ ದಿನಾಂಕಃ **24-01-2025**

ಮುಂದುವರೆದ ಪಾಟಿ ಸವಾಲುಃ ಶ್ರೀ. ಹೆಚ್.ಪಿ.ಎಂ ವಕೀಲರಿಂದ

ಜಯರಾಂ ರವರ ಬ್ಯಾಂಕ್ ಖಾತೆಗಳ ನನಗೆ ಸಂಪೂರ್ಣ ಮಾಹಿತಿ ಇರುತ್ತದೆ. ಅವರಿಗೆ ಎಸ್.ಬಿ.ಐ, ಕೆನರ ಬ್ಯಾಂಕ್, ಕರ್ನಾಟಕ ಬಾಂಕ್, ಹೆಚ್.ಡಿ.ಎಫ್.ಸಿ ಬ್ಯಾಂಕ್ ಗಳಲ್ಲಿ ಖಾತೆಗಳು ಇರುತ್ತವೆ. ಆರೋಪಿ ಮತ್ತು ಫಿರ್ಯಾದಿ ಸ್ನೇಹಿತರು ಎಂದರೆ ಸರಿ. ಅವರಿಬ್ಬರು ಗುತ್ತಿಗೆ ಕೆಲಸ ಒಟ್ಟಿಗೆ ಮಾಡುತ್ತಿದ್ದರು ಎಂದರೆ ಸರಿ. ಈ ಸಂಬಂಧ ಆರೋಪಿ ಜಯರಾಂ ರವರಿಂದ ದಿಃ**29-07-2020** ರಂದು **3** ಲಕ್ಷ ನಗದು ಸಾಲ ಪಡೆದಿದ್ದರು ಎಂದರೆ ಸರಿಯಲ್ಲ. ದಿಃ**26-08-2020** ರಂದು **3,99,500/-** ಹಣವನ್ನು ಆರೋಪಿಯ ಖಾತೆಗೆ ಫಿರ್ಯಾದುದಾರರು ವರ್ಗಾವಣೆ ಮಾಡಿರುತ್ತಾರೆ ಎಂದರೆ ಸರಿಯಲ್ಲ. ಫಿರ್ಯಾದಿಯ ಪತ್ನಿ ಹೆಸರು ವನಿತಾ. ಅವರ ಖಾತೆಯಿಂದ ದಿಃ**16-10-2020** ರಂದು **5** ಲಕ್ಷ ಹಣವನ್ನು ಆರೊಪಿಯ ಖಾತೆಗೆ ವರ್ಗಾವಣೆ ಮಾಡಿದ್ದಾರೆ ಎಂದರೆ ಸರಿಯಲ್ಲ. ದಿಃ**24-11-2020** ರಂದು **99,700/-** ಹಣವನ್ನು ಫಿರ್ಯಾದಿ ಆರೋಪಿಯ ಖಾತೆಗೆ ವರ್ಗಾವಣೆ ಮಾಡಿದ್ದಾರೆ ಎಂದರೆ ಸರಿಯಲ್ಲ. ದಿಃ**07-12-2020** ರಂದು **2,49,000/-** ಹಣವನ್ನು ಫಿರ್ಯಾದಿ ಆರೋಪಿಯ ಖಾತೆಗೆ ವರ್ಗಾವಣೆ ಮಾಡಿದ್ದಾರೆ ಎಂದರೆ ಸರಿಯಲ್ಲ.

ದಿಃ**11-12-2020** ರಂದು **4,49,000/-** ಫಿರ್ಯಾದಿ ಆರೋಪಿಯ ಖಾತೆಗೆ ವರ್ಗಾವಣೆ ಮಾಡಿದ್ದಾರೆ ಎಂದರೆ ನನಗೆ ಗೊತ್ತಿಲ್ಲ. ದಿಃ**08-02-2021** ರಂದು **3,99,000/-** ಫಿರ್ಯಾದಿ ಆರೋಪಿಯ ಖಾತೆಗೆ ವರ್ಗಾವಣೆ ಮಾಡಿದ್ದಾರೆ ಎಂದರೆ ಸರಿಯಲ್ಲ. ದಿಃ**08-02-2021** ರವರೆಗೆ ಒಟ್ಟು **23,96,200/-** ಆರೋಪಿ ಫಿರ್ಯಾದಿಯಿಂದ ಪಡೆದಿದ್ದರು ಎಂದರೆ ಸರಿಯಲ್ಲ. ಈ ಹಣವನ್ನು ಶೇಕಡ **3** ರಂತೆ ಬಡ್ಡಿಗೆ ಪಡೆದಿದ್ದರು ಎಂದರೆ ಸರಿಯಲ್ಲ. ಇದಕ್ಕೆ ಬಡ್ಡಿ ಸಹ ಆರೋಪಿ ಪಾವತಿ ಮಾಡುತ್ತಿದ್ದರು ಎಂದರೆ ಸರಿಯಲ್ಲ. ಫಿರ್ಯಾದಿಯ ಎಸ್.ಬಿ.ಐ ಖಾತೆ

ನಂ.**03714539335** ಕ್ಕೆ ದಿಃ**07-02-2022** ರಂದು ಆರೋಪಿ **49,000/-** ವರ್ಗಾವಣೆ ಮಾಡಿದ್ದಾರೆ ಎಂದರೆ ನನಗೆ ಗೊತ್ತಿಲ್ಲ. ಅದೇ ಖಾತೆಗೆ ದಿಃ**07-02-2022** ರಂದು **25** ಸಾವಿರ ವರ್ಗಾವಣೆ ಮಾಡಿದ್ದಾರೆ ಎಂದರೆ ನನಗೆ ಗೊತ್ತಿಲ್ಲ. ಹೆಚ್.ಡಿ.ಎಫ್.ಸಿ ಖಾತೆ ನಂ.**59109448325927** ಕ್ಕೆ ದಿಃ**11-08-2021** ರಂದು ಆರೋಪಿ **1** ಲಕ್ಷ ವರ್ಗಾವಣೆ ಮಾಡಿದ್ದಾರೆ ಎಂದರೆ ಸರಿಯಲ್ಲ. ಈ ಬಗ್ಗೆ ದಾಖಲೆ ಇದೆ ಎಂದರೆ ನನಗೆ ಗೊತ್ತಿಲ್ಲ.

ದಿಃ**01-10-2020** ರಂದು ಆರೋಪಿ ಫಿರ್ಯಾದಿಗೆ **15,000/-** ಕರ್ನಾಟಕ ಬ್ಯಾಂಕ್ ಖಾತೆಗೆ ವರ್ಗಾವಣೆ ಮಾಡಿದ್ದಾರೆ ಎಂದರೆ ಸರಿಯಲ್ಲ. ದಿಃ**11-11-2020** ರಂದು **36,000/-** ಫಿರ್ಯಾದಿಯ ಖಾತೆಗೆ ಆರೋಪಿ ವರ್ಗಾವಣೆ ಮಾಡಿದ್ದಾರೆ ಎಂದರೆ ಸರಿಯಲ್ಲ. ದಿಃ**17-02-2020** ರಂದ ಪುನಃ **36,000/-** ಆರೋಪಿ ಫಿರ್ಯಾದಿಯ ಖಾತೆಗೆ ವರ್ಗಾವಣೆ ಮಾಡಿದ್ದಾರೆ ಎಂದರೆ ಸರಿಯಲ್ಲ. ದಿಃ**06-02-2021** ರಂದು **60,000/-** ಹಣವನ್ನು ಫಿರ್ಯಾದಿಯ ಖಾತೆಗೆ ಆರೋಪಿ ವರ್ಗಾವಣೆ ಮಾಡಿದ್ದಾರೆ ಎಂದರೆ ಸರಿಯಲ್ಲ. ದಿಃ**08-02-2021** ರಂದು **50,000/-** ಆರೋಪಿ ಫಿರ್ಯಾದಿಯ ಕೆನರ ಬ್ಯಾಂಕ್ ಖಾತೆಗೆ ವರ್ಗಾವಣೆ ಮಾಡಿದ್ದಾರೆ ಎಂದರೆ ಸರಿಯಲ್ಲ. ಅದೇ ದಿನ **25,000/-** ಹಣವನ್ನು ಕರ್ನಾಟಕ ಬ್ಯಾಂಕ್ ಖಾತೆಗೆ ವರ್ಗಾವಣೆ ಮಾಡಿದ್ದಾರೆ ಎಂದರೆ ಸರಿಯಲ್ಲ. ದಿಃ**15-11-2021** ರಂದು **1,50,000/-** ಆರೋಪಿ ಫಿರ್ಯಾದಿಯ ಖಾತೆಗೆ ವರ್ಗಾವಣೆ ಮಾಡಿದ್ದಾರೆ ಎಂದರೆ ಸರಿಯಲ್ಲ.

ದಿಃ**01-09-2021** ರಂದು **50,000/-** ಆರೋಪಿ ಫಿರ್ಯಾದಿಯ ಖಾತೆಗೆ ವರ್ಗಾವಣೆ ಮಾಡಿದ್ದಾರೆ ಎಂದರೆ ಸರಿಯಲ್ಲ. ಅದೇದಿನ **25,000/-** ನಗದು ರೂಪದಲ್ಲಿ ನೀಡಿದ್ದಾರೆ ಎಂದರೆ ಸರಿಯಲ್ಲ. **4** ಖಾತೆಗಳ ಬ್ಯಾಂಕ್ ಸ್ಟೇಟ್ ಮೆಂಟ್ ಅನ್ನು ಹಾಜರುಪಡಿಸಲು ತೊಂದರೆ ಇಲ್ಲ. ದಿಃ**07-02-2022** ರವರೆಗೆ ಒಟ್ಟು **6,58,000/-** ಆರೋಪಿ ಫಿರ್ಯಾದಿಗೆ ಪಾವತಿ ಮಾಡಿದ್ದಾರೆ ಎಂದರೆ ಸರಿಯಲ್ಲ. ಹಣ ಕೊಡುವಾಗ ಆರೋಪಿಯಿಂದ **9** ಸಹಿ ಮಾಡಿದ ಖಾಲಿ

ಚೆಕ್ಕುಗಳನ್ನು ಪಡೆದಿರುತ್ತೇವೆ ಎಂದರೆ ಸರಿಯಲ್ಲ. ದಿ:**29-07-2020** ರಂದು ಎಸ್.ಬಿ.ಐ ಕುಶಾನಲಗರದ ಶಾಖೆಯ ಚೆಕ್ ನಂ.**083463** ಚೆಕ್ ಅನ್ನು ನೀಡಿರುತ್ತಾರೆ ಎಂದರೆ ಸರಿಯಲ್ಲ. ಹಾಗೂ ಚೆಕ್ ನಂ.**083464, 083465** ಅದೇ ದಿನ ಭದ್ರತೆಗಾಗಿ ನೀಡಿರುತ್ತಾರೆ ಎಂದರೆ ಸರಿಯಲ್ಲ. ಈ ಪ್ರಕರಣದ ಚೆಕ್ ನಂ.**083465** ಎಂದರೆ ನನಗೆ ನೆನಪಿಲ್ಲ. ದಿ:**16-10-2021** ರಂದು ಕುಶಾಲನಗರದ ಎಸ್.ಬಿ.ಐ ಗೆ ಸೇರಿದ ಚೆಕ್ ನಂ.**518921, 518922, 518923** ಅನ್ನು **16-10-2020** ರಂದು ಭದ್ರತೆಗಾಗಿ ಆರೋಪಿಯಿಂದ ಪಡೆದಿರುತ್ತಾರೆ ಎಂದರೆ ಸರಿಯಲ್ಲ. ದಿ:**19-11-2020** ರಂದು ಚೆಕ್ ನಂ.**518927, 518928, 518929** ನ್ನು ಭದ್ರತೆಗಾಗಿ ಫಿರ್ಯಾದಿ ಪಡೆದಿರುತ್ತಾರೆ ಎಂದರೆ ಸರಿಯಲ್ಲ.

ಜಯರಾಂ ರವರು ಬಾಲಾಜಿ ಫೈನಾನ್ಸ್ ನಡೆಸುತ್ತಿದ್ದಾರೆ ಎಂದರೆ ಸರಿ. ಅದರಲ್ಲಿ ತುಂಬಾ ಜನ ಕೆಲಸ ಮಾಡುತ್ತಾರೆ ಎಂದರೆ ಸರಿ. ಅದರಲ್ಲಿ ನಾನು, ನಂದಿನಿ, ರೇಣುಖಾ, ನಿರ್ಮಳ ಕೆಲಸ ಮಾಡುತ್ತೇವೆ. ನಂದಿನಿ ರವರು ದಿ:**15-02-2022** ರಂದು ದಿ:**08-03-2022** ರಂದು ವಾಟ್ಸಪ್ ನಲ್ಲಿ ಆರೋಪಿಗೆ ಬಡ್ಡಿ ಬಾಕಿ ಇದೆ ಎಂದು ಮೆಸೇಜ್ ಕಳುಹಿಸಿರುತ್ತಾರೆ ಎಂದರೆ ಸರಿಯಲ್ಲ. ಅದರಲ್ಲಿ **3,92,000/-** ಹಾಗೂ **3,95,000/-** ಬಡ್ಡಿ ಬಾಕಿ ಇದೆ ಎಂದು ನಮೂದು ಮಾಡಿರುತ್ತಾರೆ ಎಂದರೆ ಸರಿಯಲ್ಲ. ಇದರಿಂದ ಬಡ್ಡಿ ವ್ಯವಹಾರ ಮತ್ತು ಲೇವಾದೇವಿ ವ್ಯವಹಾರ ಮಾಡುತ್ತೇವೆ ಎಂದು ಗೊತ್ತಾಗಿರುತ್ತದೆ ಎಂದರೆ ಸರಿಯಲ್ಲ. ಹೆಚ್ಚು ಬಡ್ಡಿ ಪಡೆಯುತ್ತಿದ್ದರಿಂದ ನಮ್ಮ ಮತ್ತು ಆರೋಪಿ ನಡುವೆ ಮನಸ್ತಾಪ ಉಂಟಾಗಿರುತ್ತದೆ ಎಂದರೆ ಸರಿಯಲ್ಲ. ಹೆಚ್ಚು ಬಡ್ಡಿ ಇದೆ ಎಂದು ಬೆದರಿಕೆ ಹಾಕಲು ಶುರು ಮಾಡಿರುತ್ತೇವೆ ಎಂದರೆ ಸರಿಯಲ್ಲ.

ಮನಸ್ತಾಪ ಆದ ಕಾರಣ ಆರೋಪಿ ಫಿರ್ಯಾದಿಯಿಂದ ಚೆಕ್ ಅನ್ನು ವಾಪಸ್ಸು ಕೊಡುವಂತೆ ಕೇಳಿರುತ್ತಾರೆ ಎಂದರೆ ಸರಿಯಲ್ಲ. ನಂತರ ಫಿರ್ಯಾದಿ ಹಲವಾರು ಸಬೂಬುಗಳನ್ನು ಹೇಳಿ ಚೆಕ್ ವಾಪಸ್ಸು ಕೊಟ್ಟಿಲ್ಲ ಎಂದರೆ ಸರಿಯಲ್ಲ. ಬಡ್ಡಿ ನೀಡಿಲ್ಲ ಎಂದರೆ ಚೆಕ್ ಇಟ್ಟುಕೊಂಡು ಬೇರೆ ಬೇರೆ ಕಡೆ

ಪ್ರಕರಣ ದಾಖಲು ಮಾಡುತ್ತೇವೆ ಎಂದು ಬೆದರಿಕೆ ಹಾಕಿರುತ್ತೇವೆ ಎಂದರೆ ಸರಿಯಲ್ಲ. ಫೈನಾನ್ಸ್ ಮಾಡುವುದರಿಂದ **20-30** ಸಾವಿರಕ್ಕಿಂತ ಹೆಚ್ಚಿನ ವ್ಯವಹಾರವನ್ನು ಖಾತೆ ಮೂಲಕ ಮಾಡಬೇಕು ಎಂದು ಮಾಹಿತಿ ಇರುತ್ತದೆ. ಏಪ್ರಿಲ್ ಮತ್ತು ಜೂನ್ **2022** ರಲ್ಲಿ ಫಿರ್ಯಾದಿ ಬಳಿ ಅಷ್ಟು ಹಣ ಇರಲಿಲ್ಲ ಎಂದರೆ ಸರಿಯಲ್ಲ. ಆರೋಪಿಗೆ ಹಣ ನೀಡಿಲ್ಲ ಎಂದರೆ ಸರಿಯಲ್ಲ. ಅಕ್ರಮ ಹಣ ಪಡೆಯಲು ಪ್ರಕರಣ ದಾಖಲು ಮಾಡಿರುತ್ತೇವೆ ಎಂದರೆ ಸರಿಯಲ್ಲ. ಚೆಕ್ ಅನ್ನು ಪಡೆದಾಗ ಇಷ್ಟು ದೊಡ್ಡ ಮೊತ್ತದ ವ್ಯವಹಾರ ನಡೆದಿಲ್ಲ ಎಂದರೆ ಸರಿಯಲ್ಲ. ಆ ಬಗ್ಗೆ ದಾಖಲೆ ಹಾಜರುಪಡಿಸಿಲ್ಲ ಎಂದರೆ ಸರಿಯಲ್ಲ. ಆ ರೀತಿ ಕೊಡಲು ತೊಂದರೆ ಇಲ್ಲ. ಈ ಹಣದ ಸಂಬಂಧ ಆರೋಪಿ ಯಾವುದೇ ಚೆಕ್ ಅನ್ನು ಕೊಟ್ಟಿಲ್ಲ ಎಂದರೆ ಸರಿಯಲ್ಲ. ಈ ಪ್ರಕರಣಕ್ಕೂ ಆರೋಪಿಗೆ ಯಾವುದೇ ಸಂಬಂಧ ಇಲ್ಲ ಎಂದರೆ ಸರಿಯಲ್ಲ. ಆರೋಪಿಗೆ ತೊಂದರೆ ಕೊಡಲು ಈ ಪ್ರಕರಣ ದಾಖಲು ಮಾಡಿರುತ್ತೇವೆ ಎಂದರೆ ಸರಿಯಲ್ಲ.

ಪಾಟಿ ಸವಾಲು ಮುಕ್ತಾಯವಾಯಿತು.

ಮರು ವಿಚಾರಣೆ ಇಲ್ಲ.

**(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಗಿದೆ).**

Sd/-
**ಓ ಹೇ ಕೇ ಸರಿ ಇದೆ**

**ಪ್ರ ದ ನ್ಯಾ ದಂ ಸೋ ಪೇಟೆ**